ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.519/2021

| | | | |
|---|---|---|---|
| ಹೆಸರು | : | ಡಾ . ಶಿವಕುಮಾರ್ ಎನ್ | ಸಿ .ಡಬ್ಲ್ಯೂ:6 |
| ತಂದೆಯ ಹೆಸರು | : | ಜೆ ಜಿ ನರಸಪ್ಪ | ಪಿ .ಡಬ್ಲ್ಯೂ:8 |
| ವಯಸ್ಸು | : | 62 ವರ್ಷ | |
| ಉದ್ಯೋಗ | : | ನಿವೃತ್ತ ವೈದ್ಯಾಧಿಕಾರಿಗಳು | |
| ವಾಸಸ್ಥಳ | : | ತುಮಕೂರು | |

ಸಾಕ್ಷಿಯನ್ನು ದಿಃ 21-07-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 05-08-2018 ರಿಂದ 31-08-2024 ರವರೆಗೆ ಗುಬ್ಬಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಯಾಗಿ ಸೇವೆ ಸಲ್ಲಿಸಿದ್ದೇನೆ .

ದಿಃ 15-04-2021 ರಂದು ರಾತ್ರಿ2.30 ಗಂಟೆಗೆ ಚಾಸಾ -1 ರವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆಂದು ಬಂದಿದ್ದರು . ಆ ಸಮಯ ದಿಃ 14-04-2021 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ವ್ಯಕ್ತಿಗಳು ತನ್ನ ಮೇಲೆ ಹಲ್ಲೆ ಮಾಡಿದರು ಎಂದು ತಿಳಿಸಿದರು . ನಾನು ಅವರನ್ನು ಚಿಕಿತ್ಸೆಗೆ ಒಳಪಡಿಸಿದ್ದು ಅವರನ್ನು ಪರಿಶೀಲಿಸಲಾಗಿ ಅವರ ಮೈಮೇಲೆ ಈ ರೀತಿಯ ಗಾಯಗಳು ಕಂಡುಬಂದಿರುತ್ತದೆ .

1. ಹಣೆಯ ಎಡಭಾಗದಲ್ಲಿ ತರಚಿದ ಗಾಯವಿತ್ತು .

ಸದರಿ ಗಾಯವು ಸಾಧಾರಣಾ ಸ್ವರೂಪದ ಗಾಯವೆಂದು ತಿಳಿಸಿ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ . ನಿಪಿ -4 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -4 (ಬಿ ) ಎಂದು ಗುರುತಿಸಲಾಯಿತು.

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ- .

ಯಾವುದೇ ವ್ಯಕ್ತಿಯು ತೋಟದಲ್ಲಿ ಕೆಲಸ ಮಾಡುವಾಗ ಬದುವಿನಲ್ಲಿ ನಡೆಯುತ್ತಾ ಕಾಲು ಜಾರಿ ಬಿದ್ದಲ್ಲಿ ಮೇಲೆ ಹೇಳಿದಂತಹ ಸ್ವರೂಪದ ಗಾಯವಾಗುವ ಸಾಧ್ಯತೆ ಇದೆ ಎಂದರೆ ಸರಿ . ದಿಃ 14-04-2024 ರಂದು ಚಾಸಾ -1 ರವರು ನನ್ನ ಬಳಿ ಚಿಕಿತ್ಸೆ ಬಂದಿಲ್ಲ ಎಂದರೆ ಸರಿ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ